





# ವಿಶಿಷ್ಟ ಕ್ರಿಸ್ಮಸ್ ಟ್ರೀ!

ವರ್ಷಪೂರ್ತಿ ಶೀತದ ದಿನವನ್ನು ಅಪರೂಪವಾಗಿ ನೋಡುವ ಸ್ಥಳಗಳಲ್ಲಿ ಕ್ರಿಸ್ಮಸ್ ಸಂಪ್ರದಾಯಗಳು ಒಂದು ಸವಾಲಾಗಿರಬಹುದು. ಆದರೆ ಅರಿಯಾನ ಚಾಂಡ್ಲರ್ ನಗರದ ಜನರು ಹವಾಮಾನಕ್ಕೆ ಸರಿಹೊಂದುವಂತೆ ತಮ್ಮ ಸಂಪ್ರದಾಯಗಳನ್ನು ಸರಳವಾಗಿ ಅಳವಡಿಸಿಕೊಂಡಿದ್ದಾರೆ. ಪ್ರತಿವರ್ಷವೂ ಕ್ರಿಸ್ಮಸ್ ಹಬ್ಬದಂದು ಸ್ಥಳೀಯವಾಗಿ ದೊರೆಯುವ ಟಂಬಲ್ ವೀಡ್ (ಮಾಟಗಾತಿಯ ಹುಲ್ಲು) ರಾಶಿಯನ್ನು ಕ್ರಿಸ್ಮಸ್ ಮರದ ಆಕಾರದಲ್ಲಿ ಪೇರಿಸುತ್ತಾರೆ.

1957ರಿಂದಲೇ ಆಚರಿಸಿಕೊಂಡು ಬಂದಿರುವ ಈ ಸಂಪ್ರದಾಯವನ್ನು ಜನರು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ. ನಗರದ ಕಾರ್ಮಿಕರು ಒಣಗಿದ ಟಂಬಲ್ ವೀಡ್‌ಗಳನ್ನು ಸಂಗ್ರಹಿಸಲು ಆರಂಭಿಸುತ್ತಾರೆ, ಅದು ಗಾಳಿ ಬೀಸಿದಾಗಲೆಲ್ಲಾ ಉರುಳುತ್ತಿರುತ್ತದೆ. ಸಂಗ್ರಹಿಸಿದ ಸಸ್ಯಗಳಿಗೆ ಬಿಳಿ ಬಣ್ಣ ಹಾಗೂ ಬೆಂಕಿ ನಿವಾರಕ ರಾಸಾಯನಿಕವನ್ನು ಲೇಪನ ಮಾಡಲಾಗುತ್ತದೆ. ನಂತರ ಮರದ ಆಕಾರವನ್ನು ನೀಡಲು ತಂತಿಯ ಚೌಕಟ್ಟಿನ ಸುತ್ತಲೂ ಇರಿಸಲಾಗುತ್ತದೆ. ಈ ಮರ ಮಿನುಗುವಂತೆ ಮಾಡಲು 65 ಪೌಂಡುಗಳಷ್ಟು ಚಿಮಕಿ (ಗ್ಲಿಟರ್) ಅನ್ನು ಸಿಂಪಡಿಸಿ ನಂತರ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುತ್ತದೆ.

ಪ್ರತೀವರ್ಷವೂ ಬೃಹತ್ ಕ್ರಿಸ್ಮಸ್ ಮರವನ್ನು ರೂಪಿಸಲು ಸುಮಾರು 1000 ಒಣಗಿದ ಟಂಬಲ್ ವೀಡ್ ಸಸ್ಯಗಳು ಬೇಕಾಗುತ್ತವೆ. ಅತ್ಯಂತ ವಿಶಿಷ್ಟವಾದ ಚಾಂಡ್ಲರ್ ನಗರದ ಕ್ರಿಸ್ಮಸ್ ಮರವು ಸಾವಿರಾರು ಜನರನ್ನು ತನ್ನತ್ತ ಸೆಳೆಯುತ್ತದೆ.

■ ವಿದ್ಯಾ ವಿ. ಹಾಲಭಾವಿ